Nurturing Minds

**ಡಿಸೆಂಬರ್ 30, 2016, ಚೆನ್ನೈ, ಭಾರತ**

ಪತ್ರಿಕಾ ಪ್ರಕಟಣೆ

# ಪಿಯರ್‌ಸನ್ ಅಕಾಡೆಮಿ ಇಂಡಿಯಾದಿಂದ ಆರು ಭಾರತೀಯ ಭಾಷೆಗಳಲ್ಲಿ ಉದ್ಯೋಗ ಮಾರ್ಗದರ್ಶನ ಸಾಧನ ಬಿಡುಗಡೆ, ಸಮೂಹಕ್ಕೆ ಹೆಚ್ಚು ಮಾಹಿತಿಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲು ನೆರವು

ಪಿಯರ್‌ಸನ್ ಕ್ಲಿನಿಕಲ್ ಅಂಡ್ ಟ್ಯಾಲೆಂಟ್ ಅಸೆಸ್‌ಮೆಂಟ್‌ನ ಸೇವಾ ವಿಭಾಗ ಮಾನಸಿಕ ವಿಶ್ಲೇಷಣೆಗಳ ಪ್ರಕಾಶಕ ಪಿಯರ್‌ಸನ್ ಅಕಾಡೆಮಿ ಇಂಡಿಯಾ(ಪಿಎಐ) ಇಂದು ಮೈ ಚಾಯ್ಸ್ ಮೈ ಫ್ಯೂಚರ್(ಎಂಸಿಎಂಎಫ್) ಎಂಬ ಭಾರತೀಯ ಸಂದರ್ಭದಲ್ಲಿ ಉದ್ಯೋಗ ಮಾರ್ಗದರ್ಶನ ನೀಡುವ ಆನ್‌ಲೈನ್ ವ್ಯಕ್ತಿತ್ವ ಮೌಲ್ಯಮಾಪನ ಪರಿಹಾರಗಳನ್ನು ಆರು ಭಾರತೀಯ ಭಾಷೆಯ ಆವೃತ್ತಿಗಳನ್ನು ಪ್ರಾರಂಭಿಸಿದೆ. ಎಂಸಿಎಂಎಫ್ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಹಾಗೂ ವೃತ್ತಿಪರರಿಗೆ ಅವರ ನೈಜ ವ್ಯಕ್ತಿತ್ವ ಅನ್ವೇಷಿಸಿಕೊಳ್ಳಲು ಮತ್ತು ಅವರ ವ್ಯಕ್ತಿತ್ವದ ಲಕ್ಷಣಗಳನ್ನು ಅವರ ಉದ್ಯೋಗಕ್ಕೆ ಹೊಂದಿಕೊಳ್ಳುವಂತೆ ರೂಪಿಸಿಕೊಳ್ಳಲು ನೆರವಾಗುತ್ತದೆ. ಐಐಟಿ ಮದ್ರಾಸ್‌ನಲ್ಲಿ ಆಯೋಜಿಸಲಾಗಿದ್ದ 26ನೇ ವಾರ್ಷಿಕ ನ್ಯಾಷನಲ್ ಅಸೋಸಿಯೇಷನ್ ಆಫ್ ಸೈಕಾಲಜಿಸ್ಟ್ಸ್(ಎನ್ಎಒಪಿ) ಸಮ್ಮೇಳನದಲ್ಲಿ ಇದಕ್ಕೆ ಚಾಲನೆ ನೀಡಲಾಗಿದ್ದು ದೇಶಾದ್ಯಂತ ಶಿಕ್ಷಣ ತಜ್ಞರು, ಶಾಲೆ ಮತ್ತು ಮಾನಸಿಕ ಆರೋಗ್ಯ ವೃತ್ತಿಪರರು ಭಾಗವಹಿಸಿದ್ದರು.

ಎಂಸಿಎಂಎಫ್ ಭಾರತೀಯ ಭಾಷೆಯ ಆವೃತ್ತಿಗಳೊಂದಿಗೆ ವಿದ್ಯಾರ್ಥಿಗಳು, ವೃತ್ತಿಪರರು ತಮ್ಮ ವ್ಯಕ್ತಿತ್ವವನ್ನು ಇಂಗ್ಲಿಷ್ ಮಾತ್ರವಲ್ಲದೆ ಹಿಂದಿ, ಬಂಗಾಳಿ, ಕನ್ನಡ, ಮಲೆಯಾಳಂ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಪರೀಕ್ಷಿಸಿಕೊಳ್ಳಬಹುದು. ಈ ಹೆಚ್ಚುವರಿ ಭಾಷೆಯ ಆವೃತ್ತಿಗಳು ಇಂಗ್ಲಿಷ್‌ನ ಮೈ ಚಾಯ್ಸ್ ಮೈ ಫ್ಯೂಚರ್ ಪ್ರಕಟಣೆಯನ್ನು ಅನುಸರಿಸುತ್ತವೆ ಮತ್ತು ಲಕ್ಷಾಂತರ ಮಂದಿ ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಮಾಹಿತಿಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲು ಸನ್ನದ್ಧರಾಗಿಸುತ್ತವೆ. ಎಂಸಿಎಂಎಫ್ ಭಾರತೀಯ ಭಾಷೆಯ ಆವೃತ್ತಿಗಳು ಉದ್ಯೋಗ ಮಾರ್ಗದರ್ಶನದ ಸಾಧನಗಳ ಅಂತರವನ್ನು ತುಂಬುವ ಮೂಲಕ ಭಾರತದಲ್ಲಿ ಇಂಗ್ಲಿಷ್ ಮಾತನಾಡದ ಜನರನ್ನು ತಲುಪಲಿವೆ.

ಎಂಸಿಎಂಎಫ್ ಮತ್ತು ಅದರ ಭಾರತೀಯ ಭಾಷೆಯ ಆವೃತ್ತಿಗಳ ಸೇರ್ಪಡೆಯೊಂದಿಗೆ ಪಿಯರ್‌ಸನ್ ಅಕಾಡೆಮಿ ಇಂಡಿಯಾ(ಪಿಎಐ) ಕೆ-12 ಮತ್ತು ಉನ್ನತ ಶಿಕ್ಷಣ ವಿಭಾಗಗಳಿಗೆ ಉದ್ಯೋಗ ಮಾರ್ಗದರ್ಶನ ನೀಡುತ್ತದೆ. ಈ ವೈಜ್ಞಾನಿಕ ಮತ್ತು ಸಾಂಸ್ಕೃತಿಕವಾಗಿ ಪ್ರಸ್ತುತವಾಗಿರುವ ಉದ್ಯೋಗ ಮಾರ್ಗದರ್ಶನ ಪರಿಹಾರವನ್ನು ಶಾಲೆಗಳು ಮತ್ತು ಇತರೆ ಸಂಸ್ಥೆಗಳಿಗೆ ಭಾರತದಾದ್ಯಂತ ಕೊಂಡೊಯ್ದಿರುವ ಪಿಎಐ ಸೂಕ್ತವಾದ ಉದ್ಯೋಗದ ಆಯ್ಕೆಗಳನ್ನು ಮಾಡಿಕೊಳ್ಳಲು ಶ್ರಮಿಸುವ ಲಕ್ಷಾಂತರ ಯುವ ಮಂದಿಗೆ ಅದರಲ್ಲೂ ಇಂಗ್ಲಿಷ್ ಭಾಷೆಯ ಸೀಮಿತ ಜ್ಞಾನವಿರುವ ವಿದ್ಯಾರ್ಥಿಗಳಿಗೆ ನೆರವಾಗುತ್ತದೆ.

## ಮೈ ಚಾಯ್ಸ್ ಮೈ ಫ್ಯೂಚರ್ ಕುರಿತು

ಎಂಸಿಎಂಎಫ್ ಆಳವಾದ ಸಂಶೋಧನೆ ಆಧರಿಸಿದೆ ಮತ್ತು ಭಾರತದಾದ್ಯಂತ 4200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ಮೌಲ್ಯಮಾಪನ ಮಾಡಲ್ಪಟ್ಟಿದೆ. ಭಾರತದ ಸಂದರ್ಭದಲ್ಲಿ ಉದ್ಯೋಗಗಳನ್ನು ರೂಪಿಸಿರುವ ಎಂಸಿಎಂಎಫ್ ಹನ್ನೆರಡು ವ್ಯಕ್ತಿತ್ವದ ಲಕ್ಷಣಗಳನ್ನು ಮೌಲ್ಯಮಾಪನ ಮಾಡುತ್ತದೆ. ಈ ಹನ್ನೆರಡು ಲಕ್ಷಣಗಳನ್ನು ನಾಲ್ಕು ಮೂಲಭೂತ ವ್ಯಕ್ತಿತ್ವ ಲಕ್ಷಣಗಳು ಹಾಗೂ ಎಂಟು ಉದ್ಯೋಗ ಆಧರಿತ ವ್ಯಕ್ತಿತ್ವ ಲಕ್ಷಣಗಳಾಗಿ ವಿಂಗಡಿಸಲಾಗಿದೆ. ಮೂಲ ವ್ಯಕ್ತಿತ್ವದ ಲಕ್ಷಣಗಳು ವ್ಯಕ್ತಿಗೆ ಯಾವುದೇ ಉದ್ಯೋಗಕ್ಕೆ ಹೋಗುವುದಾದರೂ ಮುಖ್ಯವಾಗಿವೆ. ಉದ್ಯೋಗ ಆಧರಿತ ವ್ಯಕ್ತಿತ್ವದ ಲಕ್ಷಣಗಳು ಆಯಾ ಉದ್ಯೋಗಕ್ಕೆ ಸಂಬಂಧಿಸಿವೆ. ಪ್ರತಿ ವ್ಯಕ್ತಿತ್ವ ಲಕ್ಷಣವನ್ನೂ ಆರು ಆಯಾಮಗಳಲ್ಲಿ ಅಳೆಯಲಾಗುತ್ತದೆ.

30 ನಿಮಿಷಗಳ ಮೌಲ್ಯಮಾಪನದ ಅಂತ್ಯದಲ್ಲಿ ಟೆಸ್ಟ್ ಪಡೆದವರು ಸ್ವಯಂಚಾಲಿತವಾದ, ಸಮಗ್ರ ಮತ್ತು ವೈಯಕ್ತಿಕಗೊಳಿಸಿದ ವ್ಯಕ್ತಿತ್ವ ವರದಿಯನ್ನು ಪಡೆಯುತ್ತಾರೆ. ಪಿಎಐ ಟೆಸ್ಟ್ ತೆಗೆದುಕೊಳ್ಳುವವರನ್ನು ಮಾನ್ಯತೆ ಪಡೆದ ಎಂಸಿಎಂಎಫ್ ಕೌನ್ಸೆಲ್ಲರ್‌ಗಳ ರಾಷ್ಟ್ರವ್ಯಾಪಿ ಜಾಲಕ್ಕೆ ಸಂಪರ್ಕಿಸುತ್ತಿದ್ದು ಈ ಟೆಸ್ಟ್ ಪಡೆಯುವವರು ಡೇಟಾ-ಬ್ಯಾಕ್ಡ್ ಕೆರೀರ್ ಕೌನ್ಸೆಲ್ಲಿಂಗ್ ಅನ್ನು ಎಂಸಿಎಂಎಫ್ ವ್ಯಕ್ತಿತ್ವ ವರದಿಯನ್ನು ಆಧರಿಸಿ ಪಡೆಯುತ್ತಾರೆ.

### ಎಂಸಿಎಂಎಫ್ ಅನುಕೂಲಗಳು

- ಈ ಟೆಸ್ಟ್ ತೆಗೆದುಕೊಳ್ಳುವವರು ವಿದ್ಯಾರ್ಥಿ ಅಥವಾ ವೃತ್ತಿಪರರಾಗಿರಲಿ ಅವರ ಪ್ರಭಾವಿಸಬಲ್ಲ ವ್ಯಕ್ತಿತ್ವ ಲಕ್ಷಣಗಳ ಕುರಿತು ಒಳನೋಟ ಪಡೆಯುತ್ತಾರೆ, ಇದರಿಂದ ಅವರು ಮಾಹಿತಿಪೂರ್ಣ ಮತ್ತು ಉದ್ದೇಶದ ಉದ್ಯೋಗದ ಸಂಬಂಧಿತ ನಿರ್ಧಾರಗಳನ್ನು ಕೈಗೊಳ್ಳಬಹುದು.

- ಪೋಷಕರು ಅವರ ಮಗುವಿನ ಉದ್ಯೋಗ ಸಂಬಂಧಿತ ಆಸಕ್ತಿಗಳ ಕುರಿತು ಒಳನೋಟ ಪಡೆಯುತ್ತಾರೆ ಮತ್ತು ಅವರ ಮಗುವಿನ ವೈಯಕ್ತಿಕ ಬೆಳವಣಿಗೆ ಮತ್ತು ಉದ್ಯೋಗ ಸಂಬಂಧಿತ ಆಯ್ಕೆಗಳನ್ನು ಬೆಂಬಲಿಸಲು ನೆರವಾಗುತ್ತದೆ.

- ಶಾಲೆ ಮತ್ತು ಉದ್ಯೋಗದ ಕೌನ್ಸೆಲ್ಲರ್‌ಗಳು ವಿದ್ಯಾರ್ಥಿಗಳು ಮತ್ತು ಇತರೆ ವ್ಯಕ್ತಿಗಳ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳುವ ಮೂಲಕ ಪರಿಣಾಮಕಾರಿ, ಅರ್ಥಪೂರ್ಣ ಉದ್ಯೋಗದ ಕೌನ್ಸೆಲ್ಲಿಂಗ್ ಮತ್ತು ಸಲಹೆಯನ್ನು ನೀಡಲು ಅವಕಾಶ ಕಲ್ಪಿಸುತ್ತದೆ.

### ಎಂಸಿಎಂಎಫ್ ಭಾರತೀಯ ಭಾಷೆಯ ಆವೃತ್ತಿಗಳ ಬಳಕೆಯ ಅನುಕೂಲಗಳು

- ಭಾಷೆಯ ಆಯ್ಕೆಗಳು ಪರೀಕ್ಷೆ ತೆಗೆದುಕೊಳ್ಳುವವರ ಉದ್ಯೋಗ ಆಸಕ್ತಿಗಳು ಮತ್ತು ವ್ಯಕ್ತಿತ್ವದ ಪರಿಮಾಣಗಳನ್ನು ಹೆಚ್ಚು ನಿಖರವಾಗಿ ಇಂಗ್ಲಿಷ್ ಭಾಷೆಗೆ ತಕ್ಕಷ್ಟು ತೆರೆದುಕೊಳ್ಳದೇ ಇರುವವರಿಗೆ ಅನುಕೂಲ ಒದಗಿಸುತ್ತವೆ.

- ಪ್ರಾದೇಶಿಕ ಭಾಷೆಗಳ ಮಾಧ್ಯಮಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಪ್ರಮುಖ ಶೈಕ್ಷಣಿಕ ಮೈಲಿಗಲ್ಲುಗಳಲ್ಲಿ ಸೂಕ್ತ ಉದ್ಯೋಗದ ಆಯ್ಕೆ ಮಾಡಿಕೊಳ್ಳಲು ನೆರವಾಗುತ್ತದೆ.

- ಸರ್ಕಾರದ ಬೆಂಬಲಿತ ಕೌಶಲ್ಯ ಅಭಿವೃದ್ಧಿ ಮತ್ತು ಶಿಕ್ಷಣ ಕಾರ್ಯಕ್ರಮಗಳು ತಮ್ಮ ವ್ಯಾಪ್ತಿಯನ್ನು ಮಕ್ಕಳು ಮತ್ತು ಯುವಜನರಿಗೆ ನಗರದಾಚೆಗೂ ವಿಸ್ತರಿಸಬಹುದು.

- ಈ ಆನ್‌ಲೈನ್ ಅಸೆಸ್‌ಮೆಂಟ್‌ನ ಭಾರತದ ಭಾಷೆಯ ಆವೃತ್ತಿಗಳು ಭಾರತ ಸರ್ಕಾರದ ಡಿಜಿಟಲ್ ಇಂಡಿಯಾ ಉಪಕ್ರಮಗಳಿಗೆ ಕೊಡುಗೆ ನೀಡುತ್ತದೆ.

ಪಿಯರ್‌ಸನ್ ಕ್ಲಿನಿಕಲ್ ಅಂಡ್ ಟ್ಯಾಲೆಂಟ್ ಅಸೆಸ್‌ಮೆಂಟ್‌ನ ಕಂಟ್ರಿ ಹೆಡ್ ಮತ್ತು ನಿರ್ದೇಶಕ **ಫಿಲಿಪ್ ಕುರಿಯನ್,** 'ಎಂಸಿಎಂಎಫ್ ಭಾರತೀಯ ಭಾಷೆಗಳ ಆವೃತ್ತಿಗಳನ್ನು ಮಾರುಕಟ್ಟೆಗೆ ತರಲು ಭಾರತದ ಸಂವೇದನೆಗಳಿಗೆ ಜಾಗತಿಕ ಗುಣಮಟ್ಟದ ನಮ್ಮ ಉತ್ಪನ್ನಗಳನ್ನು ತರುವ ನಮ್ಮ ಬದ್ಧತೆಗೆ ಸಾಕ್ಷಿಯಾಗಿದೆ. ಎಂಸಿಎಂಎಫ್ ಭಾರತೀಯ ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಅವರ ಉದ್ಯೋಗದ ಪ್ರಯಾಣವನ್ನು ವಸ್ತುನಿಷ್ಠ ಒಳನೋಟ ಮತ್ತು ಅವರ ಭಾಷೆಯ ಆಯ್ಕೆಯೊಂದಿಗೆ ರೂಪಿಸಿಕೊಳ್ಳಲು ಅವಕಾಶ ನೀಡುತ್ತದೆ' ಎಂದರು.

ಈ ಪ್ರಾರಂಭದ ಆಶಯ ಭಾಷಣ ಮಾಡಿದ ಐಐಟಿ ಮದ್ರಾಸ್‌ನ ಡಿಪಾರ್ಟ್‌ಮೆಂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಪ್ರೊಫೆಸರ್ ಎಲ್.ಎಸ್.ಗಣೇಶ್, 'ನಮ್ಮ ಯುವಜನರಿಗೆ ಅವರ ವ್ಯಕ್ತಿತ್ವಗಳನ್ನು ವಿಶ್ವಾಸಾರ್ಹ ರೀತಿಯಲ್ಲಿ ಅದರಲ್ಲೂ ಅವರ ಉದ್ಯೋಗದ ದೃಷ್ಟಿಯಿಂದ ಪರೀಕ್ಷಿಸಿಕೊಳ್ಳುವುದು ಬಹಳ ಮುಖ್ಯ. ಉದ್ಯೋಗದ ಆಯ್ಕೆಯು ಅವರ ವ್ಯಕ್ತಿತ್ವದೊಂದಿಗೆ ಹೊಂದಿಕೊಳ್ಳುವುದು ಬಹಳ ಅಗತ್ಯವಾಗಿದ್ದು ಇದರಿಂದ ವೃತ್ತಿಯಲ್ಲಿ ಸಂತೃಪ್ತಿ ಮತ್ತು ಉದ್ಯೋಗದ ಸ್ಥಳದಲ್ಲಿ ಹೆಚ್ಚಿನ ಉತ್ಪಾದಕತೆ ದೊರೆಯುತ್ತದೆ' ಎಂದರು.

---

**ಪಿಯರ್‌ಸನ್ ಅಕಾಡೆಮಿ ಇಂಡಿಯಾ(ಪಿಎಐ)** ಪಿಯರ್‌ಸನ್ ಕ್ಲಿನಿಕಲ್ ಅಂಡ್ ಟ್ಯಾಲೆಂಟ್ ಅಸೆಸ್‌ಮೆಂಟ್(ಪಿಸಿಟಿಎ)ನ ಪಿಎಐನ ಸೇವಾ ಅಂಗವಾಗಿದ್ದು ವ್ಯಕ್ತಿಗಳಿಗೆ ಮಾನಸಿಕ ಸೌಖ್ಯ ಮತ್ತು ಗರಿಷ್ಠ ಕಲಿಕೆಯ ಅವಕಾಶವನ್ನು ಸೈಕಲಾಜಿಕಲ್ ಅಸೆಸ್‌ಮೆಂಟ್ ಅಂಡ್ ಇಂಟರ್‌ವೆನ್ಷನ್ ಸೇವೆಗಳು, ವೃತ್ತಿಪರ ತರಬೇತಿ ಮತ್ತು ಸರ್ಟಿಫಿಕೇಷನ್ ಮತ್ತು ಕೆರಿಯರ್ ಕೌನ್ಸೆಲ್ಲಿಂಗ್ ಸೇವೆಗಳನ್ನು ಒದಗಿಸುತ್ತದೆ.

ಪಿಎಐ ಸೇವೆಗಳ ಕುರಿತು ಹೆಚ್ಚು ತಿಳಿಯಲು ಇಲ್ಲಿ ಭೇಟಿ ಕೊಡಿ: www.pearsonclinical.in/pai

**ಪಿಯರ್‌ಸನ್ ಕ್ಲಿನಿಕಲ್ ಅಂಡ್ ಟ್ಯಾಲೆಂಟ್ ಅಸೆಸ್‌ಮೆಂಟ್(ಪಿಸಿಟಿಎ)** ಕಳೆದ 100ಕ್ಕೂ ಹೆಚ್ಚು ವರ್ಷಗಳಿಂದ ಪರೀಕ್ಷೆಗಳ ಪ್ರಕಟಣೆಯಲ್ಲಿ ಮುಂಚೂಣಿಯಲ್ಲಿದೆ. ಇದು ಪ್ರಕಟಿಸಿದ ಎಷ್ಟೋ ಪರೀಕ್ಷೆಗಳು ಈಗ ಆಯಾ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಮಾನ್ಯತೆ ಪಡೆದಿವೆ. ಪಿಸಿಟಿಎ ಮಾನಸಿಕ ಆರೋಗ್ಯ ಮತ್ತು ಮಾನಸಿಕ ಸೌಖ್ಯವನ್ನು ಸೈಕಲಾಜಿಕಲ್ ಅಸೆಸ್‌ಮೆಂಟ್ ಮತ್ತು ಇಂಟರ್‌ವೆನ್ಷನ್ ಪರಿಹಾರಗಳ ಮೂಲಕ ನೀಡುವ ಮೂಲಕ ವ್ಯಕ್ತಿಗಳ ವೈಯಕ್ತಿಕ, ಶೈಕ್ಷಣಿಕ ಮತ್ತು ವೃತ್ತಿ ಜೀವನವನ್ನು ಪರಿವರ್ತಿಸುತ್ತದೆ. ಪಿಸಿಟಿಎ ವಿಶ್ವದ ಕಲಿಕಾ ಕಂಪನಿ ಪಿಯರ್‌ಸನ್ ಭಾಗವಾಗಿದೆ.

ಪಿಯರ್‌ಸನ್ ಕ್ಲಿನಿಕಲ್ ಅಂಡ್ ಟ್ಯಾಲೆಂಟ್ ಅಸೆಸ್‌ಮೆಂಟ್(ಪಿಸಿಟಿಎ)ಕುರಿತು ಇಲ್ಲಿ www.pearsonclinical.in ತಿಳಿಯಿರಿ.

---

ಟಿಪ್ಪಣಿ:

ಎಂಸಿಎಂಎಫ್ ಅನ್ನು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಮದ್ರಾಸ್‌ನ ಹಿರಿಯ ಪ್ರೊಫೆಸರ್‌ಗಳು ಮತ್ತು ಸಂಶೋಧಕರ ಸಹಯೋಗದಲ್ಲಿ ಶೈಕ್ಷಣಿಕ ಸೇವಾ ಕಂಪನಿ ಬೋಧ್‌ಬ್ರಿಡ್ಜ್ ಅಭಿವೃದ್ಧಿಪಡಿಸಿದೆ. ಪಿಸಿಟಿಎ ಬೋಧ್‌ಬ್ರಿಡ್ಜ್‌ನೊಂದಿಗೆ ಪಾಲುದಾರಿಕೆ ಹೊಂದಿದ್ದು ಎಂಸಿಎಂಎಫ್ ಇಂಗ್ಲಿಷ್ ಮತ್ತು ಭಾರತೀಯ ಭಾಷೆಯ ಆವೃತ್ತಿಗಳು ಭಾರತದ ಶಿಕ್ಷಣ ಸಂಸ್ಥೆಗಳು ಮತ್ತು ವ್ಯಕ್ತಿಗಳಿಗೆ ಹಾಗೂ ಉಳಿದ ಭಾರತ ಉಪಖಂಡಕ್ಕೂ ದೊರೆಯುತ್ತದೆ.